# ದೇವರ ರಾಜ್ಯವು ಹೇಗೆ ಬೆಳೆಯುವುದು?

ದೇವರ ರಾಜ್ಯವು ಅಭಿವೃದ್ಧಿಯಾಗಬೇಕೆಂದು ನಾವು ಬಯಸಬೇಕಾದ ಹಲವು ಕಾರಣಗಳಿವೆ. ದೇವರ ರಾಜ್ಯವು ಹೇಗೆ ಅಭಿವೃದ್ಧಿಯಾಗುತ್ತದೆ?

**ದೇವರ ರಾಜ್ಯವು ಹೇಗೆ ಅಭಿವೃದ್ಧಿಯಾಗುವುದೆಂದು ಯೇಸುವು ‘ಬಿತ್ತುವವನ ಸಾಮ್ಯ’ದ ಮೂಲಕ ವಿವರಿಸಿದ್ದಾನೆ.**

ಮಾರ್ಕ 4:26–29:

> ಇನ್ನೂ ಆತನು ಅವರಿಗೆ ಹೇಳಿದ್ದು – ಒಬ್ಬನು ಭೂಮಿಯಲ್ಲಿ ಬೀಜವನ್ನು ಹಾಕಿ ರಾತ್ರಿ ಮಲಗುತ್ತಾ ಹಗಲು ಎದ್ದಿರುತ್ತಾ ಇರಲು ಅವನಿಗೆ ತಿಳಿಯದ ರೀತಿಯಲ್ಲಿ ಆ ಬೀಜವು ಹುಟ್ಟಿ ಬೆಳೆಯುವದು. ಇದರಂತೆ ದೇವರ ರಾಜ್ಯ. ಭೂಮಿಯು ಮೊದಲು ಗರಿಯನ್ನೂ, ಆಮೇಲೆ ಹೊಡೆಯನ್ನೂ, ತರುವಾಯ ತೆನೆಯಲ್ಲಿ ತುಂಬಾ ಕಾಳನ್ನೂ ತನ್ನಷ್ಟಕ್ಕೆ ತಾನೇ

ಹುಟ್ಟಿಸುತ್ತದೆ. ಆದರೆ ಫಲಮಾಗಿದ ಕೂಡಲೆ ಅವನು ಸುಗ್ಗಿ ಕಾಲ ಬಂತೆಂದು ಕೊಯಿಸುತ್ತಾನೆ ಅಂದನು.

ಯೇಸುವು ಕೇವಲ ಕೃಷಿಯ ಬಗ್ಗೆ ವಿವರಿಸದೇ, ದೇವರ ರಾಜ್ಯದ ಕುರಿತಾಗಿ ವಿವರಿಸುತ್ತಿರುವನು. ದೇವರ ರಾಜ್ಯದ ಅಭಿವೃದ್ಧಿಗಾಗಿ ಕನಿಷ್ಠ ಆರು (6) ತುಂಡುಗಳು ಅವಶ್ಯಕತೆಯಿದೆ:



ರೈತ



ಬೀಜಗಳು



ಖಾಲಿ ಭೂಮಿ



ಸಮಯ



ಉಪಕರಣಗಳು




ದೇವರು

ದೇವರ ರಾಜ್ಯದಲ್ಲಿ, ರೈತರೆಂದರೆ ಯೇಸುವಿನಲ್ಲಿ ನಂಬಿಕೆಯಿಟ್ಟು ನೆಲೆಗೊಂಡಿರುವವರು. ಈ ವಿಶ್ವಾಸಿಗಳು ಸುವಾರ್ತೆ ಅಂದರೆ ಯೇಸುವಿನ ಸಂದೇಶವೆಂಬ ಬೀಜವನ್ನು ಹರಡುವರು. ಖಾಲಿ ಭೂಮಿಯಂತಿರುವ ಅವಿಶ್ವಾಸಿಗಳಲ್ಲಿ ಸುವಾರ್ತೆಯನ್ನು ಸಾರುವರು. ಹೊಸ ವಿಶ್ವಾಸಿಗಳು ಬೆಳೆಯಲು, ಸಮಯ ಮತ್ತು ಪ್ರಯತ್ನಗಳನ್ನು ಮಾಡಲಾಗುವುದು. ತಕ್ಕ ಸಮಯಕ್ಕೆ ರೈತರು ವಿಶ್ವಾಸಿಗಳ ಸುಗ್ಗಿಯನ್ನು ಒಟ್ಟು ಗೂಡಿಸಿ ಸಭೆಗಳನ್ನು ರಚಿಸುವರು. ಈ ಹೊಸ ಸಭೆಗಳ ವಿಶ್ವಾಸಿಗಳು ಹೊಸ ಖಾಲಿ ಹೊಲಗಳಿಗೆ ಹೋಗುವುದರೊಂದಿಗೆ ಶೀಘ್ರದಲ್ಲಿಯೇ ಕೃಷಿ ಚಕ್ರವು ಪ್ರಾರಂಭವಾಗುತ್ತದೆ. ದೇವರು ತನ್ನ ರಾಜ್ಯದ ಬೆಳವಣಿಗೆಗೆ ಅಂತಿಮ ಕಾರಣ, ಆದರೆ ನಿಷ್ಠಾವಂತ ಅನುಯಾಯಿಗಳ ವಿಧೇಯತೆಯ ಮೂಲಕ ಅವನು ಈ ಬೆಳವಣಿಗೆಯನ್ನು ತರುತ್ತಾನೆ.

ದೇವರ ರಾಜ್ಯದ ಅಭಿವೃದ್ಧಿ ಹೇಗೆ ಆಗುವುದೆಂದು ಜ್ಞಾಪಿಸಿಕೊಳ್ಳಲು, ಈ ಕೆಳಕಂಡ ರೇಖಾಚಿತ್ರವು ಸಹಕಾರಿಯಾಗಿರುತ್ತದೆ:




1. ದೇವರಲ್ಲಿ ನೆಲೆಗೊಳ್ಳುವಿಕೆ
2. ಖಾಲಿ ಹೊಲದೆಡೆಗೆ ಪ್ರವೇಶ
3. ಸುವಾರ್ತೆ ಸಾರೋಣ
4. ಶಿಷ್ಯತ್ವ
5. ಸಭೆಗಳ ಸ್ಥಾಪನೆ
6. ಗುಣಿಸಲ್ಪಡುವ ನಾಯಕರುಗಳು

ರೇಖಾಚಿತ್ರದಂತೆ, ದೇವರ ರಾಜ್ಯದ ಅಭಿವೃದ್ಧಿಯ ಕುರಿತು ಅನೇಕ ಭಾಗಗಳನ್ನು ಒಳಗೊಂಡಿದೆ. ಆ ಭಾಗಗಳೇನೆಂದರೆ, ದೇವರಲ್ಲಿ ನೆಲೆಗೊಂಡಿರುವುದು, ಅವಿಶ್ವಾಸಿಗಳೆಂಬ ಹೊಸಭೂಮಿಗಳನ್ನು ಪ್ರವೇಶಿಸುವುದು, ಸುವಾರ್ತೆಯನ್ನು ಸಾರುವುದು, ಶಿಷ್ಯತ್ವ, ಸಭೆಗಳ ರಚನೆ, ಮತು ನಾಯಕರುಗಳ ಗುಣಿಸುವುದು. ಇದುವೇ ಚಕ್ರವು, ಮತ್ತು ಪ್ರತೀ ಭಾಗವು ದೇವರ ರಾಜ್ಯದ ಅಭಿವೃದ್ಧಿಯನ್ನು ಪರಿಣಾಮಕಾರಿಯಾಗಿಸಲು ಅಗತ್ಯವಿದೆ.

**ದೇವರ ರಾಜ್ಯದ ಬೆಳವಣಿಗೆಗೆ**

© 2023 ದೇವರ ರಾಜ್ಯದ ಬೆಳವಣಿಗೆಗೆ
ದೇವರ ರಾಜ್ಯದ ಬೆಳವಣಿಗೆಗೆ ಹೆಚ್ಚಿನ ವಿಷಯಗಳಿಗಾಗಿ,
ಭೇಟಿ ನೀಡಿ: **www.forkingdomgrowth.com**

Scripture quotations are from The Holy Bible, BSI - Kannada - J.V. published by The Bible Society of India. Used by permission.
All rights reserved.

ರಾಜ್ಯದ ಬೆಳವಣಿಗೆಗೆ ಈ ವಸ್ತುಸಂಗ್ರಹಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ತುಂಬಾ ಧನ್ಯವಾದಗಳು. ಕರ್ತನಲ್ಲಿ ನಿಮ್ಮ ಸೇವೆ ಎಂದಿಗೂ ವ್ಯರ್ಥವಾಗುವುದಿಲ್ಲ.